ಇಲ್ಲಿಂದ 3 ಕಿ.ಮೀ. ಕೆಳಗೆ ಕೃಷ್ಣಾ ನದಿಯು 60 ಮೀಟರ್ ಆಳಕ್ಕೆ ಧುಮುಕಿ ಜಲಪಾತ ನಿರ್ಮಿಸಿದೆ. ಸುರಪುರದಲ್ಲಿರುವ ಗೋಪಾಲಸ್ವಾಮಿಯಗುಡಿ, ಅರಮನೆ ಮತ್ತು ಕೋಟೆಯ ಅವಶೇಷಗಳು ಪ್ರೇಕ್ಷಣೀಯ ಸ್ಥಳಗಳಾಗಿವೆ.

ಇಲ್ಲಿಗೆ ಭೇಟಿ ನೀಡುವ ಪ್ರವಾಸಿಗರ ಅಂಕಿ ಸಂಖ್ಯೆ ಹಾಗೂ ನಿವೇಶನಗಳ ಲಭ್ಯತೆಯ ಬಗ್ಗೆ ಖಚಿತ ಮಾಹಿತಿ ಪಡೆದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಪ್ರಶ್ನೆ ಸಂಖ್ಯೆ : 68 (205) ಶ್ರೀ ನಿಂಗಪ್ಪ ಹೆಚ್. (ಕುಣಿಗಲ್)

ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರುಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಕೆ.ಪಿ.ಟಿ.ಸಿ.ಎಲ್. ನಿಂದ ಮಂಜೂರಾಗದ ವಿದ್ಯುತ್ ಉಪ ಸ್ಥಾವರಗಳ ನಿರ್ಮಾಣಕ್ಕೆ ಸರ್ಕಾರಿ ಭೂಮಿ ಲಭ್ಯವಿಲ್ಲದ ಕಡೆ ಸ್ಥಾವರಗಳ ನಿರ್ಮಾಣ ವಿಳಂಬವಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾದಿದ್ದಲ್ಲಿ, ಖಾಸಗಿ ಜಮೀನುಗಳನ್ನು ಆಯಾ ಪ್ರದೇಶದಲ್ಲಿ ಚಾಲ್ತಿಯಲ್ಲಿರುವ ಮಾರುಕಟ್ಟೆ ಬೆಲೆಗೆ ಖರೀದಿಸಿ ಉಪಸ್ಥಾವರ ನಿರ್ಮಾಣ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಇ) ಹಾಗಿದ್ದಲ್ಲಿ, ಯಾವಾಗ ಕ್ರಮ ಕೈಗೊಳ್ಳಲಾಗುವುದು;

ಶ್ರೀ ಹೆಚ್.ಡಿ.ರೇವಣ್ಣ

ಅ) ಈ ಹಿಂದೆ, ಕೆ.ಪಿ.ಟಿ.ಸಿ.ಎಲ್. ಮತ್ತು ವಿದ್ಯುತ್ ಸರಬರಾಜು ಕಂಪನಿಗಳಿಂದ ಮಂಜೂರಾಗುತ್ತಿದ್ದ ವಿದ್ಯುತಂ ಉಪ–ಕೇಂದ್ರಗಳ ನಿರ್ಮಾಣಕ್ಕೆ ಸರ್ಕಾರಿ ಭೂಮಿ ಲಭ್ಯವಿಲ್ಲದ ಕಡೆ ವಿದ್ಯುತ್ ಉಪ ಕೇಂದ್ರಗಳ ನಿರ್ಮಾಣ ವಿಳಂಬವಾಗುತ್ತಿತ್ತು. ಆದರೆ, ಈಗ ಆಸಗಿ ಜಮೀನುಗಳನ್ನು ಕ.ವಿ.ಪ್ರ.ನಿ.ನಿ.ಯು ಸರ್ಕಾರಿ ಭೂಮಿ ಲಭ್ಯವಿಲ್ಲದ ಕಡೆಗಳಲ್ಲಿ ನೇರವಾಗಿ ಖರೀದಿ ಮಾಡಲು ಸರ್ಕಾರವು ಕರ್ನಾಟಕ ಭೂ ಸುಧಾರಣೆ ಕಾಯ್ದೆಯಲ್ಲಿ ತಿದ್ದುಪಡಿ ಮಾಡಿ

ಆದೇಶ ಹೊರಡಿಸಿರುತ್ತದೆ. ಸರ್ಕಾರಿ ಭೂಮಿ ಲಭ್ಯವಿಲ್ಲದೆ ಕಡೆಗಳಲ್ಲಿ ಖಾಸಗಿ ಜಮೀನುಗಳನ್ನು ನೇರವಾಗಿ ಈಗ ಖರೀದಿಸುತ್ತಿರುವುದರಿಂದ, ವಿದ್ಯುತ್ ಉಪಕೇಂದ್ರಗಳ ನಿರ್ಮಾಣವನ್ನು ಕೈಗೊಳ್ಳುವಲ್ಲಿ ಅಷ್ಟೇನು ವಿಳಂಬವಾಗುತ್ತಿಲ್ಲ.

ಆ) ಖಾಸಗಿ ಜಮೀನುಗಳನ್ನು ವಿದ್ಯುತ್ ಉಪ–ಕೇಂದ್ರಗಳ ನಿರ್ಮಾಣಕ್ಕೆ ಭೂಮಾಲೀಕರಿಂದ ಖರೀದಿಸಲು ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಭೂ ಬೆಲೆ ನಿಗದೀಕರಣ ಸಮಿತಿಯನ್ನು ಸರ್ಕಾರವು ರಚಿಸಿರುತ್ತದೆ. ಭೂ ಮಾಲೀಕರು ಒಪ್ಪುವ ಹಾಗೂ ಮಾರುಕಟ್ಟೆ / ಮಾರ್ಗಸೂಚಿ ಬೆಲೆಗಳ ಆಧಾರದ ಮೇಲೆ ಕಂದಾಯ ಇಲಾಖೆಯು ನೀಡಿರುವ ನಿರ್ದೇಶನಗಳ ಪ್ರಕಾರ ಜಮೀನುಗಳನ್ನು ಖರೀದಿಸುವ ಪದ್ಧತಿ ಈಗಾಗಲೇ ಜಾರಿಯಲ್ಲಿರುತ್ತದೆ.

ಪ್ರಶ್ನೆ ಸಂಖ್ಯೆ : 69 (217) ಶ್ರೀ ನಿರಾಣಿ ಮುರಗೇಶ್ ರುದ್ರಪ್ಪ (ಬೀಳಗಿ)

ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಬೀಳಗಿ ಮತ ಕ್ಷೇತ್ರ ವ್ಯಾಪ್ತಿಯಲ್ಲಿ 33/11, 110/33 ಕೆ.ವಿ. ಸಾಮರ್ಥ್ಯದ ವಿದ್ಯುತ್ ವಿತರಣಾ ಸ್ಥಾವರಗಳೆಷ್ಟು

ಆ) ಈಗ ಕೈಗೆತ್ತಿಕೊಂಡಿರುವ ಸ್ಥಾವರ ಸಂಖ್ಯೆಗಳು

ಇ) ಹೊಸ ಸ್ಥಾವರಗಳಿಗೆ ಪಡೆದುಕೊಂಡ ಜಮೀನುಗಳ ರೈತರಿಗೆ ಅವರು ನೀಡಿದ ಜಮೀನಿಗೆಪರಿಹಾರ ನೀಡಲಾಗಿದೆಯೇ;

ಈ) ಇಲ್ಲವಾದಲ್ಲಿ, ಕಾರಣಗಳೇನು;

ಉ) ಕೋಲಾರ ಮತ್ತು ಅನಗವಾಡಿ ವಿದ್ಯುತ್ ವಿತರಣಆ ಕೇಂದ್ರಗಳಿಗೆ ಜಮೀನು ನೀಡಿದ ರೈತರಿಗೆ ನಿಗದಿತ ಸಮಯದಲ್ಲಿ ಪರಿಹಾರ ನೀಡದಿರುವ ಬಗ್ಗೆ ಸರ್ಕಾರದ ಕ್ರಮಗಳೇನು;

ಶ್ರೀ ಹೆಚ್.ಡಿ.ರೇವಣ್ಣ